ವಿನಯಾ ಒಕ್ಕುಂದ ಅವರ ಪ್ರಶ್ನೆಯಲ್ಲೂ ಈ ಕಾಲದ ಅಮ್ಮನೊಬ್ಬಳು ಇಣುಕುತ್ತಾಳೆ.

'ಈ ಫೇಸ್‌ಬುಕ್ಕು ಯಾರದೆಲ್ಲ ಬರ್ತ್‌ಡೇ ಇದೆ ಅಂತ ಎಚ್ಚರಿಸ್ತಾ ಇರೋದು, ಅದನ್ನು ನಿಷ್ಠೆಯಿಂದ ನಂಬಿ ಈ ಮಕ್ಕಳು ಮಧ್ಯರಾತ್ರಿ 12 ಗಂಟೆಯವರೆಗೆ ಕಾದು ಶುಭಾಶಯ ಹೇಳುತ್ತ ಕಿರುಚುವುದು ವಾಡಿಕೆ ಆಗಿದೆ. ಅವರೇನು ಮಧ್ಯರಾತ್ರಿ ಹುಟ್ಟಿದ್ದರಾ ಎಂದು ನನಗೆ ವಿಸ್ಮಯವಾಗುತ್ತದೆ. ನನ್ನ ಎರಡನೇ ಮಗಳು ನಭಾಳಿಗೆ ನಾವು ಪಿಯುಸಿಯಲ್ಲಿ ಮೊಬೈಲ್ ಕೊಡಿಸಿದ್ದು. ಮನೆಯಲ್ಲಿ ಅತಿಥಿಗಳು ಇರುವಾಗಲೇ ಅವಳೊಮ್ಮೆ ನನಗೆ ಮೊಬೈಲ್ ಬೇಕು ಎಂದು ರಂಪ ಮಾಡಿದಳು. ಆರಂಭಕ್ಕೆ ವಾಟ್ಸ್‌ಆಪ್, ಫೇಸ್‌ಬುಕ್ ಎಲ್ಲ ಬೇಡ ಎಂದು ತಾಕೀತು ಮಾಡಿದ್ದೆಲ್ಲ ಆಯಿತು. ಮಗಳ ಓದು ಹಾಳಾಗುತ್ತದೆ ಎಂಬುದಷ್ಟೇ ನಮ್ಮ ಆಶಯವಾಗಿತ್ತು. ಆದರೆ ಕಾಲದ ಒತ್ತಡದಿಂದ ದೂರ ಸರಿಯುವುದು ಸಾಧ್ಯವಾಗುವುದಿಲ್ಲ. ಕೊನೆಗೆ ಈ ಮಕ್ಕಳಿಗೆ ಅದನ್ನು ನಿಭಾಯಿಸುವುದು ಹೇಗೆ ಎಂದು ಹೇಳಿಕೊಡುವುದೇ ಒಳಿತು ಎನಿಸಲಾರಂಭಿಸಿತು. ಆದರೆ ಮೊಬೈಲ್ ಇಲ್ಲದೇ ಇದ್ದಿದ್ದರೆ ಅವಳ ಓದು ಇನ್ನಷ್ಟು ಆಳವಾಗುತ್ತಿತ್ತು ಅಂತ ಈಗಲೂ ಅನ್ನಿಸುತ್ತದೆ' ಎನ್ನುವ ವಿನಯಾ ಅವರ ಮಾತು ಅನೇಕ ಅಮ್ಮಂದಿರ ಮನಸ್ಸಿನ ಅಭಿವ್ಯಕ್ತಿಯಂತೆ ಕಾಣಿಸುತ್ತದೆ. ಅಮ್ಮನ ಮಾತುಗಳ ಬಗ್ಗೆ ನಭಾ ಹೆಚ್ಚೇನೂ ಮಾತನಾಡುವುದಿಲ್ಲ. 'ಮೊಬೈಲ್‌ನಲ್ಲೇ ಹೆಚ್ಚು ಮುಳುಗಬೇಡ. ಹೊರಗೆ ಓಡಾಡುವಾಗ ಸ್ವಲ್ಪ ಹುಷಾರು' ಅಂತ ಅಮ್ಮ ಆಗಾಗ ಹೇಳುತ್ತಾರೆ ಎನ್ನುವ ನಭಾಳ ಮಾತಿನಲ್ಲಿ ಅಮ್ಮನ ಬಗ್ಗೆ ಕಾಳಜಿಯುಳ್ಳ ಜಾಣ ಮಗಳೊಬ್ಬಳು ಕಾಣಿಸುತ್ತಾಳೆ.



ಸಿನಿಮಾ ನಟಿ ಸಂಯುಕ್ತಾ ಹೊರನಾಡು ಕೂಡ ತನ್ನಮ್ಮ ಸುಧಾ ಬೆಳವಾಡಿ ಅವರ ಪರವಾಗಿ ನಿಲ್ಲುವ ಹುಡುಗಿ. ಹೇಳಿಕೇಳಿ ಅವರದು ಕಲಾವಿದರ ಕುಟುಂಬ. ಅಜ್ಜಿ, ತಾತ, ಅಮ್ಮ ಸೇರಿದಂತೆ ಮನೆಮಂದಿಯೆಲ್ಲ ಸಿನಿಮಾ–ನಾಟಕ ಎಂದು ಹಚ್ಚಿಕೊಂಡವರು. ಹಾಗೆಂದು ಸಂಯುಕ್ತಾ ಅವರಿಗೆ ಅಮ್ಮನಿಂದ ಮುಕ್ತ ಸ್ವಾತಂತ್ರ್ಯವೇನೂ ದೊರೆಯಲಿಲ್ಲ. 'ನನಗೆ 18 ವರ್ಷ ಆಗುವವರೆಗೆ ಅಮ್ಮ ಮೊಬೈಲ್ ಕೊಡಲೇ ಇಲ್ಲ. ಮನೆಯಲ್ಲಿ ಟೀವಿ ಸಹಿತ ಇರಲಿಲ್ಲ. ತಲೆಗೆ ಹರಳೆಣ್ಣೆ ಹಾಕಿ ಬಿಗಿಯಾಗಿ ಎರಡು ಜಡೆ ಹಾಕಿಬಿಡುತ್ತಿದ್ದರು. ನನ್ನ ಓರಗೆಯ ಹುಡುಗಿಯರೆಲ್ಲ ಮೊಬೈಲ್ ಹಿಡಕೊಂಡು ಓಡಾಡುತ್ತ ಇರುವಾಗ ನನಗೆ ಅದರ ಸಂಪರ್ಕ ಇರಲಿಲ್ಲ. ಆದ್ದರಿಂದ ನಾನು ಹೊರಲೋಕದ ಬಗ್ಗೆ, ನನ್ನ ಸೌಂದರ್ಯದ ಬಗ್ಗೆ ತಲೆಕೆಡಿಸಿಕೊಳ್ಳುವ ಗೋಜಿಗೇ ಹೋಗಿರಲಿಲ್ಲ ಅನಿಸುತ್ತದೆ' ಎನ್ನುತ್ತಾರೆ ಸಂಯುಕ್ತಾ. ಹದಿನೆಂಟರ ನಂತರ ಮೊಬೈಲ್ ಸ್ವಾತಂತ್ರ್ಯ ದೊರೆತರೂ ಅಮ್ಮನ ಆತಂಕವೇನೂ ಕಡಿಮೆಯಾಗುತ್ತದೆಯೇ? 'ನೀನೇನೂ ಹೆದರಬೇಡ. ನನ್ನನ್ನು ನಾನು ನಿಭಾಯಿಸಿಕೊಳ್ಳಬಲ್ಲೆ ಅಮ್ಮಾ' ಎಂದು ಸಂಯುಕ್ತಾ ಸಮಾಧಾನ ಹೇಳಿದ್ದರಂತೆ. ಮಗಳ ಮಾತುಗಳನ್ನು ಅಮ್ಮನೂ ವಿಶ್ವಾಸದಿಂದ ಸ್ವೀಕರಿಸಿದ್ದಾರೆ. 'ಈಗ ನಾವಿಬ್ಬರೂ ಫ್ರೆಂಡ್ಸ್. ನನ್ನ ಬಾಯ್‌ಫ್ರೆಂಡ್ಸ್ ಮಾಡುವ ಮೆಸೇಜ್‌ಗೆ ಅಮ್ಮನೇ ಉತ್ತರಿಸಿಬಿಡುತ್ತಾರೆ' ಎಂದು ತುಂಟತನದಿಂದ ಹೇಳುತ್ತಾರೆ ಸಂಯುಕ್ತಾ.

'ಅಲಂಕಾರ, ಬರ್ತ್‌ಡೇ ವಿಶ್, ಪಾರ್ಟಿ – ಇವೆಲ್ಲದರ ಫೋಟೊ ತೆಗೆದು ಅಪ್‌ಲೋಡ್ ಮಾಡುವ ಕೆಲಸಗಳನ್ನು ನಾವು 18–20 ವರ್ಷದ ಬಳಿಕವೂ ಮಾಡಬಹುದು. ಆದರೆ


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.